ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **13.03.2024**

ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ

ನನ್ನ ವಿವಾಹ ದಿಃ 27.05.2009 ರಂದು ಅಗಿರುತ್ತದೆ. ನನ್ನ ಮದುವೆ ಅದಾಗ 1 ನೇ ಪ್ರತಿವಾದಿ ಯಾವುದೇ ಕೆಲಸ ಮಾಡುತ್ತಿರುಲಿಲ್ಲ. 3 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದರು. 4 ಮತ್ತು 5 ನೇ ಪ್ರತಿವಾದಿಗಳಿಗೆ ಮದುವೆ ಅಗಿತ್ತು. 1 ನೇ ಪ್ರತಿವಾದಿ 2014 ರವರೆಗೆ ಕೂಡಿಗೆ ನಂದಿನಿ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಏನು ಕೆಲಸ ಮಾಡುತ್ತಿದ್ದರು ಎಂದು ನಾನು ಯಾರನ್ನು ಕೇಳಿ ತಿಳಿದುಕೊಂಡಿಲ್ಲ. ದಾವಾ ಸ್ವತ್ತಿನ ಐಟಂ ನಂ 1 ನ್ನು 1 ನೇ ಪ್ರತಿವಾದಿ ದಿಃ 24.11.1995 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಅದನ್ನು ಲಕ್ಕಿಗೊಪ್ಪೆಯಲ್ಲಿರುವ ಅಸ್ತಿಯನ್ನು ಮಾರಾಟ ಮಾಡಿ ಖರೀದಿಸಿರುತ್ತಾರೆ. ಸದರಿ ಅಸ್ತಿಯ ಸರ್ವೆ ನಂ ನನಗೆ ಗೊತ್ತಿಲ್ಲ. ಲಕ್ಕಿಗೊಪ್ಪೆಯ ಅಸ್ತಿಯನ್ನು ಯಾವಾಗ ಮಾರಾಟ ಮಾಡಿದ್ದರೆ ಯಾರಿಗೆ ಮತ್ತು ಯಾವ ಮೊತ್ತಕ್ಕೆ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಐಟಂ ನಂ-1 ಸ್ವತ್ತನ್ನು ಯಾವ ಮೊತ್ತಕ್ಕೆ 1 ನೇ ಪ್ರತಿವಾದಿ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ 2005 ರಿಂದ ಚಿಕ್ಕತ್ತೂರು ಗ್ರಾಮದಲ್ಲಿ ವಾಸವಿದ್ದರೆ. ಅದಕ್ಕಿಂತ ಮೊದಲು ಅವರು ಕೂಡುಮಂಗಳೂರು ಮನೆಯಲ್ಲಿ ವಾಸವಿದ್ದರು. 1 ನೇ ಅರೋಪಿ ಮೂಲತಃ ಲಕ್ಕಿಗೊಪ್ಪೆ ಗ್ರಾಮದವರು. 1 ನೇ ಪ್ರತಿವಾದಿ 1973 ರಲ್ಲಿ ಲಕ್ಕಿಗೊಪ್ಪೆ ಗ್ರಾಮ ತೂರೆದು ಕೂಡುಮಂಗಳೂರಿನಲ್ಲಿ ವಾಸವಿದ್ದರೆ ಎಂದರೆ ನನಗೆ ಗೊತ್ತಿಲ್ಲ. 1973 ರಿಂದಲೂ ಅವರು ನಂದಿನಿ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರೂ ಎಂದರೆ ನನಗೆ ಗೊತ್ತಿಲ್ಲ. ಲಕ್ಕಿಗೂಪ್ಪೆಯಲ್ಲಿ ಜಮೀನ್ ವ್ಯವಸಾಯ ಜಮೀನು ಅಗಿತ್ತು. ಸದರಿ ಜಮೀನು  ಒಂದು ಮುಕ್ಕಾಲು ಎಕರೆ ಇತ್ತು. 1973 ರಿಂದ 1 ನೇ ಪ್ರತಿವಾದಿ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಲಕ್ಕಿಗೊಪ್ಪೆಯಲ್ಲಿ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

1 ನೇ  ಪ್ರತಿವಾದಿ ದಾವಾ ಸ್ವತ್ತಿನ ಐಟಂ 2 ಸ್ವತ್ತನ್ನು ದಿಃ 10.02.2003 ರಲ್ಲಿ ಕ್ರಯಕ್ಕೆ ಪೂಣ್ಣಚ್ಚ ರವರಿಂದ 1 ಮತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತನ್ನು ರೂ 1.75.000 ರೂ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಸ್ವತಃ ಹಣದಿಂದ ಸದರಿ ಸ್ವತ್ತನ್ನು ಖರೀದಿಸಿ ಮನೆ ನಿರ್ಮಿಸಿಕೊಂಡು ವಾಸವಿದ್ದರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಐಟಂ ನಂ 3 ಮತ್ತು 4 ಸ್ವತ್ತನ್ನು 3 ನೇ ಪ್ರತಿವಾದಿ ದಿಃ 24.02.2005 ರಂದು 1.04.000 ರೂಗಳಿಗೆ ಕ್ರಯ ಪಡೆದಿರುತ್ತಾರೇ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ತಮ್ಮ ಸ್ವತಃ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ 3 ಮತ್ತು 4 ನ್ನು ತನ್ನ ವಯಕ್ತಿಕ ಸಾಲ ತೀರಿಸುವ ಸಲುವಾಗಿ 4 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಲು 3 ನೇ ಪ್ರತಿವಾದಿ ಕರಾರು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ನೋಂದಣಿ ಅಗಿದ್ದು 8 ಲಕ್ಷ ಮುಂಗಡ ಹಣ ಪಡೆದಿದ್ದು 1 ಲಕ್ಷ ಬಾಕಿ ಪಡೆಯಬೇಕಿದೆ ಎಂದರೆ ಸರಿಯಲ್ಲ.

ಐಟಂ ನಂ 5 ರಿಂದ 7 ಸ್ವತ್ತನ್ನು 3 ನೇ ಪ್ರತಿವಾದಿ ತಮ್ಮ ಸ್ವಯಾರ್ಜಿತ ಸಂಪಾದನೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ದಿಃ

18.08.2020 ರಲ್ಲಿ 3 ಲಕ್ಷ ರೂಗಳಿಗೆ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತು 5 ನೇ ಪ್ರತಿವಾದಿಯ ಹೆಸರಿನಲ್ಲಿ ಅರ್ ಟಿ ಸಿ ಇದೆ ಎಂದರೆ ಸರಿ. 5 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರೆ ಎಂದರೆ ಸರಿ. ಸದರಿ ಸ್ವತ್ತು 5 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ.

ಐಟಂ ನಂ 8 ಮತ್ತು 9 ಸ್ವತ್ತುನ್ನು 1 ನೇ ಪ್ರತಿವಾದಿ ತನ್ನ ಸ್ವತಃ ದುಡಿಮೆಯಿಂದ ಖರೀದಿ ಮಾಡಿರುತ್ತಾರೇ ಎಂದರೆ ಸಾಕ್ಷಿ ಲಕ್ಕಿಗೊಪ್ಪೆಯಲ್ಲಿರುವ ಜಮೀನು ನ್ನು ಮಾರಾಟ ಮಾಡಿ 2005 ರಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಐಟಂ ನಂ -10 ನ್ನು ಲಕ್ಕಿಗೊಪ್ಪೆಯಲ್ಲಿರುವ ಜಮೀನು ನು ಮಾರಾಟ ಮಾಡಿ 2 ನೇ ಪ್ರತಿವಾದಿ ಹೆಸರಿನಲ್ಲಿ ಖರೀದಿಸಲಾಗಿದೆ. ಸದರಿ ಐಟಂ 10 ನ್ನು ದಿಃ 01.07.2019 ರಲ್ಲಿ ತಹಸಿಲ್ದಾರವರಿಂದ 2 ನೇ ಪ್ರತಿವಾದಿಗೆ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಯ ತಂದೆಯ ಹೆಸರು ಹುಣ್ಣೆಗೌಡ. ಲಕ್ಕಿಗೊಪ್ಪೆಯಲ್ಲಿದ್ದ ಎಲ್ಲಾ ಸ್ವತ್ತುಗಳು ಹುಣ್ಣೆಗೌಡರ ಸ್ವಯಾರ್ಜಿತ ಸ್ವತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಹುಣ್ಣೆಗೌಡರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳು ಪಿತ್ರರ್ಜಿತ ಅಸ್ತಿಗಳು ಎಂದು ನ್ಯಾಯಲಾಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಐಟಂ ನಂ 1 ರಿಂದ 10 ಅಸ್ತಿಗಳು ಪ್ರತಿವಾದಿಗಳ ಸ್ವಯಾರ್ಜಿತ ಸ್ವತ್ತುಗಳಾಗಿದ್ದು ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ಮತ್ತು 2 ಹಾಗೂ 4 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಕೆ ಸಿ ಎಸ್ ವಕೀಲರು ಹಾಗೂ ಹೆಚ್ ಎನ್ ಎಸ್ ವಕೀಲರು ಮೇಲಿನ ಪಾಟೀ ಸವಾಲುನ್ನು ಅಳವಡಿಸಿಕೊಂಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶ ಕೇಳಿದ್ದು ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

sd

ಪ್ರ ದ ನ್ಯಾ ದಂ, ಕುಶಾಲನಗರ